**ಪಿ ಅಂಡ್ ಎಸ್ ಸಿ ನಂ 5/2023**

**ಪಿ. ಡಬ್ಲ್ಯೂ ಃ 1**

**ದಿಃ 12.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಎದುರುದಾರ 4 ರವರ ಪರ ಶ್ರೀ ಹೆಚ್ ಬಿ ಯು ವಕೀಲರಿಂದ ಃ**

ನಂಜೇಗೌಡರು ನನ್ನ ಗಂಡ. ನಂಜೇಗೌಡರು ಈಗಾಗಲೇ ತೀರಿಕೊಂಡಿರುತ್ತಾರೆ. ನನ್ನ ಗಂಡ ನಂಜೇಗೌಡರು ದಿನಾಂಕಃ 20.07.2023 ರಂದು ತೀರಿಕೊಂಡಿರುತ್ತಾರೆ. ಎದುರುದಾರ 1 ನನ್ನ ಅತ್ತೆ, ಎದುರುದಾರ 2 ರವರು ನನ್ನ ಮೈದುನರಾಗಬೇಕು. ಎಲ್ ಐ ಸಿ ಯ ನಾಮಿನಿ ಯಾರು ಎಂದು ನನಗೆ ಗೊತ್ತಿಲ್ಲ, ನನಗೆ ಮೋಸ ಆಗಿರುತ್ತದೆ. ನನ್ನ ಗಂಡ ವಿಕ್ಟೋರಿಯ ಆಸ್ಪತ್ರೆಯಲ್ಲಿದ್ದಾಗ ಮನೆಯಲ್ಲಿದ್ದ ಬಾಂಡ್ ಮತ್ತು ಹಣವನ್ನು ಎದುರುದಾರ 1 ಮತ್ತು 2 ರವರು ಮತ್ತು ನನ್ನ ಮಾವನವರಾದ ಬಸವೇಗೌಡರವರು ಕಳುವು ಮಾಡಿರುತ್ತಾರೆ.

ನಾನು ಎಲ್ ಐ ಸಿ ಬಾಂಡ್ ಕಳುವಾಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಪೊಲೀಸರು ರಾಜಿ ಮಾಡಿರುತ್ತಾರೆ. ಸದರಿ ದೂರನ್ನು ಯಾವ ದಿನಾಂಕ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. 4 ನೇ ಎದುರುದಾರರು ಕಾನೂನಿನ ಅನುಗುಣವಾಗಿ ಎದುರುದಾರ 2 ರವರಿಗೆ ಹಣವನ್ನು ಬಿಡುಗಡೆ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ಎದುರುದಾರ 4 ರವರಿಗೆ ಸ್ಟೇ ಅರ್ಜಿಯ ಆದೇಶವನ್ನು ದಿನಾಂಕಃ 24.11.2023 ರಲ್ಲಿ ಹಾಜರು ಮಾಡುವ ಮೊದಲೇ ಎದುರುದಾರ 4 ರವರು ಎದುರುದಾರ 2 ರವರಿಗೆ ಹಣವನ್ನು ನೀಡಿದ್ದರು ಎಂದರೆ ಸರಿ. ರೂ. 46,246 ಗಳನ್ನು ಎದುರುದಾರ 4 ರವರು ಕಾನೂನಿನ ಅನುಗುಣವಾಗಿ ಎದುರುದಾರ 2 ರವರಿಗೆ ನೀಡಿರುತ್ತಾರೆ ಎಂದರೆ ಸುಳ್ಳು.

ಎದುರುದಾರ 4 ರವರು ಸದರಿ ಹಣವನ್ನು ಎದುರುದಾರ 2 ರವರಿಗೆ ಕೊಡಬಾರದು ಎಂದು ಬೆಂಗಳೂರಿನ ಲಗ್ಗೆರೆಯ ಕೆನರಾ ಬ್ಯಾಂಕ್ ಬ್ರಾಂಚ್ ಗೆ ಪತ್ರ ಬರೆದಿದ್ದರು ಎಂದರೆ ಸರಿ. ನಾನು ಎಲ್ ಐ ಸಿ ಯ ಹಣವನ್ನು 2 ನೇ ಎದುರುದಾರರಿಂದ ವಸೂಲಾತಿ ಮಾಡಬಹುದು ಎಂದರೆ ಗೊತ್ತಿಲ್ಲ. 2 ನೇ ಎದುರುದಾರರು ಹಣ ಪಡೆದಿರುವುದರಿಂದ 4 ನೇ ಎದುರುದಾರರು ಜವಾಬ್ದಾರಿಯಾಗುವುದಿಲ್ಲ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಃ ಇಲ್ಲ

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.